ಒಬ್ಬ ಮಾನ್ಯ ಸದಸ್ಯರು: ಅವರು ಮಾತನಾಡಿದ್ದು ಆಯಿತು. ನಾವು ಮಾತನಾಡಲು ಅವಕಾಶ ಕೊಡಿ.

ಶ್ರೀ ವಾಟಾಳ್ ನಾಗರಾಜ್: ಇವತ್ತು ನ್ಯಾಯ ಮಂಡಳಿಗೆ ಒಂದು **ಖಂಡನಾ ನಿರ್ಣಯವನ್ನೂ** ಮಾಡಬೇಕಾಗುತ್ತದೆ. ತೀರ್ಮ ಏನು ಬಂದಿದೆ ಎಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು: ಸದಸ್ಯರು ಮಾತನಾಡಲಿ. ನಾವು ಸಂಪರ್ಕದಲ್ಲಿದ್ದೇವೆ ಎಂದು ಸಂಸದೀಯ ಸಚಿವರು ಹೇಳಿದ್ದಾರೆ. ಇನ್ನೊಂದಿಬ್ಬರು ಮೂವರು ಮಾತನಾಡಲಿ. ಆನಂತರ ಅವರಿಗೆ ಅವಕಾಶ ಕೊಡೋಣ. ಈಗ ಮಾನ್ಯ ಸಿಂಧ್ಯಾರವರು ಮಾತನಾಡಲಿ. ಅಷ್ಟರಲ್ಲಿ ಅವರಿಗೆ ಏನು ಮಾಹಿತಿ ಬರುತ್ತದೋ ನೋಡೋಣ.

ಒಬ್ಬ ಮಾನ್ಯ ಸದಸ್ಯರು: ಸಂಬಂಧಪಟ್ಟ ಸಚಿವರು ಒಂದು ಸ್ಟೇಟ್‌ಮೆಂಟ್ ಮಾಡಲಿ ಎಂದು ಕೇಳುತ್ತಿದ್ದೇವೆ.

ಅಧ್ಯಕ್ಷರು: ಅವರು ಸಂಪರ್ಕದಲ್ಲಿದ್ದಾರೆ, ಅವರು ಉತ್ತರ ಕೊಡುತ್ತಾರೆ. ಇನ್ನೊಂದು ಮೂರ್ನಾಲ್ಕು ಸದಸ್ಯರಿಗೆ ಅವಕಾಶ ಮಾಡಿಕೊಡುತ್ತೇನೆ. ಆನಂತರ ಅವರು ಮಾಹಿತಿ ಕೊಡುತ್ತಾರೆ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್: ಸರ್ಕಾರ ಇದರ ಬಗ್ಗೆ ಉತ್ತರ ಕೊಡುತ್ತಿಲ್ಲ. ಇದು ಸರಿಯಲ್ಲ, ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ತೀರ್ಮ ಏನು ಬಂದಿದೆ ಎಂದು ನೀವು ಹೇಳಬೇಕು.

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್: ತೀರ್ಮ ಏನೆಂದು ನೀವು ಹೇಳದಿದ್ದರೆ ನಾವು ಏನೆಂದು ಮಾತನಾಡುವುದು.

ಶ್ರೀ ಕೃಷ್ಣಬೈರೇಗೌಡ: ಹೊಸಬರಾದ ನಾವು ಮಾತನಾಡುವುದಕ್ಕೆ ಅವಕಾಶ ಕೊಡಿ. ಹೊಸಬರು ಮಾತನಾಡುವುದು ಬೇಡವೇ?

(ಅಡಚಣೆ)

ಅಧ್ಯಕ್ಷರು: ಎಲ್ಲ ನೀವು ನೀವೇ ನಿಂತುಕೊಂಡು ಮಾತನಾಡಿದರೆ ಹೇಗೆ? ಏನೂ ರೆಕಾರ್ಡ್‌ಗೆ ಹೋಗುವುದು ಬೇಡ. ನೀವು ನೀವೇ ನಿಂತುಕೊಂಡು, ನಿಮಗೆ ಇಷ್ಟ ಬಂದ ಹಾಗೆ ಮಾತನಾಡುವುದಾದರೆ ಸದನ ನಡೆಸುವುದು ಕಷ್ಟ.

(ಅಡಚಣೆ)

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರಿಂದ ಸಭಾತ್ಯಾಗ)

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಅಧ್ಯಕ್ಷರೇ, ವಾಟಾಳ್ ನಾಗರಾಜ್‌ರವರಂಥ ಹಿರಿಯರು ಈ ರೀತಿ ಮಾಡುವುದು ಸರಿಯಲ್ಲ. ಹೇಳುವುದಿಲ್ಲ ಎಂದು ನಾವು ಹೇಳೇ ಇಲ್ಲ. ಆಗಲೇ ಸಭಾತ್ಯಾಗ ಮಾಡಿದರೆ ಹೇಗೆ? ಎಲ್ಲರೂ ಮಾತನಾಡಲಿ ಎಂದು ತಾವು ಹೇಳುತ್ತಿದ್ದೀರಿ. ನಂತರ, ನಾವು ಸರ್ಕಾರಕ್ಕೆ ಏನು ಅಭಿಪ್ರಾಯ ಬಂದಿದೆ, ಏನು ಸುದ್ಧಿ ಇದೆ ಎನ್ನುವುದನ್ನು ತಿಳಿಸುತ್ತೇವೆ. ಅಷ್ಟರೊಳಗೆ ನೀವು ಹೊರಗೆ ಹೋದರೆ ಹೇಗೆ? ಖಂಡಿತವಾಗಿ ಈ ಸದನದ ಮುಖಾಂತರ ತಿಳಿಸುತ್ತೇವೆ. ನಿಮಗೂ ತಿಳಿಸುತ್ತೇವೆ, ದಯವಿಟ್ಟು ತಾವು ಬಂದು ಕುಳಿತುಕೊಳ್ಳಿ. ತಾವು ಹಿರಿಯರು, ದಯವಿಟ್ಟು ಬಂದು ಕುಳಿತುಕೊಳ್ಳಿ.

ಅಧ್ಯಕ್ಷರು: ಮಾನ್ಯ ಸಿಂಧ್ಯಾರವರೇ ಮಾತನಾಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಸನ್ಮಾನ್ಯ ಅಧ್ಯಕ್ಷರೇ, ಇದೊಂದು ಗಂಭೀರವಾದ ವಿಚಾರ ಎನ್ನತಕ್ಕಂಥಾದ್ದನ್ನು ಈಗಾಗಲೇ ಗೌರವಾನ್ವಿತ ಸದಸ್ಯರುಗಳು ಮನವರಿಕೆ ಮಾಡಿಕೊಟ್ಟಿದ್ದಾರೆ. ನಾಳೆ ನಮ್ಮೆಲ್ಲರ ಸಭೆಯನ್ನು ಕರೆದು ನಮ್ಮೆಲ್ಲರ ಅಭಿಪ್ರಾಯವನ್ನು ತೆಗೆದು ಕೊಳ್ಳುತ್ತೇವೆ ಎಂದು ಈಗಾಗಲೇ ಮಾನ್ಯ ಉಪ ಮುಖ್ಯಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದಾರೆ. ಈ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷದ ನಾಯಕರುಗಳನ್ನು ಕರೆದು, ಏನು ಮಾಡಬೇಕು ಎನ್ನತಕ್ಕಂಥಾದ್ದರ ಬಗ್ಗೆ ಮತ್ತು ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆಯೂ ಸಹ ಸಮಾಲೋಚನೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒಂದೆರಡು ಸಲಹೆಗಳನ್ನು ಕೊಡಲಿಕ್ಕೆ ಬಯಸುತ್ತೇನೆ. ಇದು ಮೇಲ್ನೋಟಕ್ಕಷ್ಟೇ ಅಲ್ಲ, ನನಗೆ ಬಂದಿರತಕ್ಕಂಥ ದೆಹಲಿಯ ಮೂಲದ ವಾರ್ತೆಗಳ ಪ್ರಕಾರವಾಗಿ, ಕರ್ನಾಟಕ ಸರ್ಕಾರಕ್ಕೆ ಮತ್ತು ಕರ್ನಾಟಕ ರಾಜ್ಯಕ್ಕೆ ಬಹಳ ದೊಡ್ಡ ಅನ್ಯಾಯವಾಗಿದೆ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. Distress formula ದಲ್ಲಿ 205 TMC ನೀರು ಬಿಡಬೇಕು ಎಂದು ಹೇಳಿದಂಥ ಸಂದರ್ಭದಲ್ಲೇ ಬಹಳ ದೊಡ್ಡ ಪ್ರತಿಭಟನೆ ಕರ್ನಾಟಕದಿಂದ ಆಯಿತು. ಕರ್ನಾಟಕಕ್ಕೆ ಆಗಿರತಕ್ಕಂಥ ಅನ್ಯಾಯ ಮತ್ತು 2–3 ವರ್ಷಗಳಲ್ಲಿ, ನಮಗೇ ನೀರು ಇಲ್ಲದೇ ಇದ್ದಂಥ ಪರಿಸ್ಥಿತಿಯನ್ನು ಟ್ರಿಬ್ಯುನಲ್ ಏಕೆ ಗಮನಿಸಲಿಲ್ಲ